**ದಿನಾಂಕ: 18-12-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ **ಬೋಧಿಸಲಾಯಿತು.**

**ಮುಂದುವರೆದ ವಾಟೀ ಸವಾಲುಃ- ಪ್ರತಿವಾದಿಯ ಪರ ಶ್ರೀ. ಎನ್.ಎಸ್.ಎಸ್, ವಕೀಲರಿಂದ:-**

12. ನನ್ನ ತಂದೆಯು ಬದುಕಿದ್ದಾಗ ಪ್ರತಿ ತಿಂಗಳು ರೂ. 30 ಸಾವಿರ ಬಾಡಿಗೆಯನ್ನು ಪಡೆದುಕೊಳ್ಳುತ್ತಿದ್ದರು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. ದಿ.20-05-2020 ರಂದು ನಿಮ್ಮ ತಂದೆಯು ಮೃತ ಪಟ್ಟ ನಂತರ ನಿಮ್ಮ ತಮ್ಮನಾದ ರಾಜಗೋಪಾಲ್ ರವರು 3ನೇ ವ್ಯಕ್ತಿಯಿಂದ ಪ್ರತಿ ತಿಂಗಳು ರೂ. 30 ಸಾವಿರ ಬಾಡಿಗೆಯನ್ನು ಪಡೆಯುತ್ತಿದ್ದರು ಎಂದು ತೋರಿಸಲು ನಿಮ್ಮ ಬಳಿ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಮ್ಮ ತಂದೆಯವರು ಬದುಕಿದ್ದಾಗ ಮತ್ತು ಮೃತ ಪಟ್ಟ ನಂತರ ದಾವಾಸ್ವತ್ತಿಗೆ ಎಷ್ಟು ಬಾಡಿಗೆ ಇತ್ತು ಎಂದು ನಿಮಗೆ ಖಚಿತವಾಗಿ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ವಾದಪತ್ರದ ಪ್ಯಾರಾ 13ರಲ್ಲಿ ಯಾವ ಆಧಾರದ ಮೇಲೆ 2022 ನೇ ಇಸವಿಯ ಜೂನ್ ನಿಂದ ಸೆಪ್ಟಂಬರ್ ವರೆಗೆ ರೂ.1,20,000/- ಹಣ ಬರಬೇಕು ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿಯು ತನ್ನ ತಂದೆ ಮೃತ ಪಟ್ಟ ನಂತರ ತಾನು ದಾವಾಸ್ವತ್ತಿನ ಮಾಲೀಕರಾಗಿದ್ದು ಮತ್ತು ಅದಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗೆ ನೋಟಿಸ್ ನ್ನು ನೀಡಿರುವ ಕಾರಣ ತನಗೆ ಸದರಿ ಹಣ ಬರಬೇಕು ಎನ್ನುತ್ತಾರೆ. ನಿಮಗೆ 3 ತಿಂಗಳಿಗೆ ರೂ.1,20,000/- ಹಣ ಬಾಡಿಗೆ ಇದೆ ಎಂದು ನಿಮಗೆ ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

13. ನಿಮ್ಮ ತಂದೆ ತಾಯಿಯವರು ಬದುಕಿದ್ದಾಗ ಪ್ರತಿವಾದಿಯು ರಾಜಗೋಪಾಲ್ ರವರಿಗೆ ಬಾಡಿಗೆಯನ್ನು ನೀಡುತ್ತಿದ್ದರು ಮತ್ತು ಈಗಲೂ ಸಹ ಅವರಿಗೆ ಬಾಡಿಗೆಯನ್ನು ನೀಡುತ್ತಿದ್ದಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪ್ರತಿವಾದಿಯು

ಯಾವುದೇ ಬಾಡಿಗೆಯನ್ನು ಬಾಕಿ ಇಲ್ಲದೇ ಇದ್ದರೂ ಸಹ ನೀವು ರೂ.1,20,000/- ಬಾಡಿಗೆ ಬಾಕಿ ಇದೆ ಮತ್ತು ಅದಕ್ಕೆ ಶೇಕಡ 12% ನಷ್ಟು ಬಡ್ಡಿಯನ್ನು ನೀಡಬೇಕು ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಈ ದಾವೆಯನ್ನು ಸಲ್ಲಿಸಿದ ನಂತರ ಪ್ರತಿವಾದಿಯು ಅನಾಧಿಕೃತವಾಗಿ ದಾವಾಸ್ವತ್ತಿನಲ್ಲಿ ಇದ್ದಾಗ ಮತ್ತು ಅದಕ್ಕೆ ಡ್ಯಾಮೇಜಸ್ ನ್ನು ನೀಡಬೇಕು ಎಂಬುವುದು ಸುಳ್ಳಾಗಿದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ಪ್ರಕಾರ ಯಾವ ಕರಾರುಪತ್ರದ ಆಧಾರದ ಮೇಲೆ ಪ್ರತಿವಾದಿಯು ಅನಾಧಿಕೃತವಾಗಿ ದಾವಾಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ತನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ಕರಾರುಪತ್ರ ಆಗಿಲ್ಲ, ತಾನು 2022 ನೇ ಇಸವಿಯಲ್ಲಿ ಪ್ರತಿವಾದಿಗೆ ನೋಟಿಸ್‌ನ್ನು ಕಳುಹಿಸಿದ್ದೇನೆ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ** ಪಾಟೀ **ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**